Sri GANGADHAR NAMOSHI.—The whole House is kept in the dark.

Mr. SPEAKER.—Enough supplementaries have been allowed on this question. All the interpellations have centred round the fact that seven seats have been given to Andhra. The Minister said that out of the seven, five are students whose parents are citizens of the Mysore State. They have settled down there. Therefore, there is nothing wrong in it and it is but proper.

Sri K. S. SURYANARAYANA RAO.—No doubt, they are all Kannada people who have settled there. But unfortunately, if we go to their University, they say that we have not got domicile or are not registered in their University and therefore are not eligible.

12-30 P. M.

Mr. SPEAKER.—That is why we must set an example by showing that we treat our people in the same way though they are out.

ಶ್ರೀ ಗಂಗಾಧರ ನಾಮೋಷಿ.—ಇಂಟಿಗ್ರೇಷ್ ಆಗುವ ಕಾಲಕ್ಕೆ ನಮ್ಮ ಕರ್ನಾಟಕದವರಿಗೆ ಆಂಧ್ರ ಪ್ರಾಂತದ ಮೆಡಿಕಲ್ ಕಾಲೇಜಿನಲ್ಲಿ 5 ಸೀಟುಗಳನ್ನು ರಿಜರ್ವ್ ಮಾಡಿ ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ಆಂಧ್ರ ಸರ್ಕಾರದವರು ಅದರಂತೆ ನಮ್ಮ ಪ್ರಾಂತದ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟನ್ನು ಕೊಟ್ಟಿಲ್ಲ. ಆಂಧ್ರ ಪ್ರಾಂತದ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಮಾರ್ಕ್ಸ್‌ಗಿಂತಲೂ ಕಡಿಮೆ ಮಾರ್ಕ್ಸ್ ಇದ್ದರೂ ಅವರಿಗೆ ನಮ್ಮ ರಾಜ್ಯದ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಟ್ಟಿದ್ದಾರೆ.

Mr. SPEAKER.—That is a separate request. The Hon'ble Member may please put it in writing and I will consider it.

Inclusion of round about Villages within the boundary limits of Mandya Municipality.

*Q.—293. **Sri J. DEVAIAH** (Mandya).—

Will the Government be pleased to state:—

(*a*) whether it is a fact that the Mandya Town Municipal Council have represented to Government urging to include the round about villages such as Kallahalli, Hosahalli, Taveregere and Guttahalli within the boundary limits of the said Municipality for the expansion of the town;

(*b*) if so, the action they have taken in this behalf?

A.—**Sri K. PUTTASWAMY** (Minister for Municipal Administration).—

(*a*) Yes.

(*b*) The proposal has been deferred for the present.

ಶ್ರೀ ಜೆ. ದೇವಯ್ಯ.—ಮಂಡ್ಯ ಟೌನನ್ನು ವಿಸ್ತರಿಸುವುದಕ್ಕಾಗಿ ಸದರಿ ಟೌನಿನ ಸುತ್ತು ಮುತ್ತ ಇರುವ ಕಲ್ಲಹಳ್ಳಿ, ಹೊಸಹಳ್ಳಿ, ತಾವರಗೆರೆ ಮತ್ತು ಗುಟ್ಟಹಳ್ಳಿ ಗ್ರಾಮಗಳನ್ನು ಮಂಡ್ಯ ಪುರಸಭೆಯ ಸರಹದ್ದಿನೊಳಗೆ ಸೇರಿಸಬೇಕೆಂದು ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ, ಕೊನೆಗೆ ಅದನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು?

ಶ್ರೀ ಕೆ. ಪುಟ್ಟಸ್ವಾಮಿ.—ಈಗ 1951ನೇ ಇಸವಿಯ ಟೌನ್ ಮುನಿಸಿಪಾಲಿಟಿಯ ಆಕ್ಟ್ ಜಾರಿಯಲ್ಲಿದೆ. ಈ ಆಕ್ಟ್ ಪ್ರಕಾರ ವಿಲೇಜ್ ಪಂಚಾಯ್ತಿಗಳನ್ನು ರದ್ದು ಮಾಡುವ ಅಧಿಕಾರವಿಲ್ಲವೆಂದು ನ್ಯಾಯಾಂಗ ಇಲಾಖೆಯವರು ಸಲಹೆ ಮಾಡಿರುವುದರಿಂದ ಅದನ್ನು ಮಾಡುವುದಕ್ಕೆ ಆಗಲ್ಲ. ಈಗ ಹೊಸದಾಗಿ ಈ ಸಭೆಯಲ್ಲಿ ಪಾಸಾಗಿರತಕ್ಕ ಮುನಿಸಿಪಾಲಿಟಿ ಕಾನೂನಿನ ಪ್ರಕಾರ ಅದಕ್ಕೆ ಅವಕಾಶವನ್ನು ಏರ್ಪಡಿಸಿಕೊಂಡಿದ್ದೇವೆ. ಆ ಕಾನೂನು ಜಾರಿಗೆ ಬಂದ ಮೇಲೆ ಅದನ್ನು ಗಮನಿಸುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಆ ನಾಲ್ಕಾರು ಹಳ್ಳಿಗಳನ್ನು ಸೇರಿಸಿಕೊಳ್ಳುವುದಕ್ಕೆ ಇರುವ ಅಡಚಣೆ ಏನು? ಈಗಾಗಲೇ ಅಲ್ಲಿ ಅನೇಕ ಬಿಲ್ಡಿಂಗ್‌ಗಳು ಬಂದು ಅಲ್ಲಿ ಸ್ಲಮ್ ಬೆಳೆಯುವುದಕ್ಕೆ ಅವಕಾಶವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಮಂಡ್ಯಾದಲ್ಲಿ ಸ್ಲಮ್ ಏನು ಆಗುತ್ತಾ ಇದೆ ಅದು ಇಂಪ್ರೆಗ್ಯುಲರ್ ಆಗಿ ಡೆವಲಪ್ ಆಗುತ್ತಾ ಇದೆ.

ಶ್ರೀ ಜಿ. ದೇವಯ್ಯ.—ಈಗ ಅಲ್ಲಿ ಕೆಲವು ಸರ್ವೆ ನಂಬರುಗಳಿಗೆ ಏಲಿನೇಷನ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಮಂಡ್ಯಾಧ ಪಕ್ಕದಲ್ಲಿರುವ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಏಲಿನೇಷನ್ ಕೇಳಿದರೆ ಅದು ಕಾನೂನುಬದ್ಧವಾಗಿದ್ದರೆ ಅದನ್ನು ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ದೇವಯ್ಯ.—ಮಂಡ್ಯಾ ಟೌನನ್ನು ವಿಸ್ತಾರ ಮಾಡುವುದಕ್ಕೆ ಅವಕಾಶ ಇದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಲ್ಪ ಅವಕಾಶ ಇದೆ. ಆದರೆ ಬೇರೆ ಊರುಗಳಲ್ಲಿರುವಷ್ಟು ಅವಕಾಶ ಅಲ್ಲಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಈಗ ತಾನೆ ಮಾನ್ಯ ಮಂತ್ರಿಗಳು ಹೇಳಿದರು, ಅಲ್ಲಿ ಇರೆಗ್ಯುಲರ್ ಡೆವಲಪ್‌ಮೆಂಟ್ ಆಗುತ್ತಿದೆ ಎಂದು. ಹಾಗಾದರೆ, ಅದನ್ನು ತಡೆಯುವುದಕ್ಕೆ ಸರ್ಕಾರದವರು ಈಗಾಗಲೇ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಸರ್ಕಾರದವರು ಏನಾದರೂ ಆ ವಿಷಯದಲ್ಲಿ ಕಣ್ಣುಮುಚ್ಚಿ ಕುಳಿತುಕೊಂಡಿದ್ದಾರೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿ ಇರೆಗ್ಯುಲರ್ ಡೆವಲಪ್‌ಮೆಂಟ್ ಆಗುತ್ತಿದೆ. ಅದನ್ನು ತಪ್ಪಿಸಬೇಕಾದರೆ ಕಾನೂನುಗಳು ಆಗಬೇಕು. ಈ ಸಭೆಯವರು ಈಗಾಗಲೇ ಪುರಸಭೆಯ ಕಾನೂನನ್ನು ಪಾಸು ಮಾಡಿದ್ದಾರೆ. ಮತ್ತು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾನೂನನ್ನು ಕೂಡ ಈ ಸಭೆಯವರು ಪಾಸು ಮಾಡಿದ್ದಾರೆ. ಅವುಗಳಿಗೆ ಪ್ರೆಸಿಡೆಂಟರ ಅನುಮತಿ ಕೂಡ ದೊರತಿದೆ. ಈ ಕಾನೂನುಗಳು ಜಾರಿಗೆ ಬಂದ ಮೇಲೆ ಇರೆಗ್ಯುಲರ್ ಡೆವಲಪ್‌ಮೆಂಟನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ.

ಶ್ರೀ ಜಿ. ದೇವಯ್ಯ.—ಮಂಡ್ಯ ಮುನಿಸಿಪಾಲಿಟಿಯವರು ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಯಾವ ಯಾವ ಜಮೀನಿಗೆ ಹಣವನ್ನು ಕೊಟ್ಟಿದ್ದಾರೆ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಬೇರೆ ಪ್ರಶ್ನೆಯನ್ನು ಹಾಕಿದರೆ ಉತ್ತರವನ್ನು ಹೇಳುತ್ತೇನೆ.

Changing the present Prohibition policy in the State.

*Q—363. Sri GANGADHAR NAMOSHI (Gulbarga) [on behalf of SRI A. KRISHNA SHETTY (Mangalore II)].

Will the Government be pleased to state :—

whether they intend to change or relax the present prohibition policy in the State?

A.—Sri M. V. RAMA RAO (Minister for Law).—

The report of the Prohibition Study Team appointed by the Government of India is being awaited and the present policy would be considered in the light of that report.